<u>ಸಾಕ್ಷಿಯನ್ನು ದಿನಾಂಕಃ **22-08-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>

1. ಈ ಕೇಸಿನಲ್ಲಿ ಯಾರು ಯಾರು ಪಕ್ಷಗಾರರು ಇರುವರು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪಾವತಿಸಲಾದ ನ್ಯಾಯಾಲಯದ ಶುಲ್ಕ ಎಷ್ಟು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೈಕಿ 4 ಸೆಂಟ್ಸ ನಮಗೆ ಸೇರಿದ್ದಾಗಿದೆ. ನಾವು 1965 ರಿಂದ ಸದರಿ 4 ಸೆಂಟ್ಸ ನಲ್ಲಿ ಸ್ವಾಧೀನದಲ್ಲಿದ್ದೇವೆ. ದಾವಾ ಆಸ್ತಿಯ ಸರ್ವೆ ನಂ 19 ಎ ಇದ್ದುಅದರ ಪೂರ್ಣ ವಿಸ್ತೀರ್ಣ 48 ಸೆಂಟ್ಸ ಇರುವುದು. 1965 ನೇ ಸಾಲಿನಿಂದ ಸದರಿ 4 ಸೆಂಟ್ಸ ಪಹಣಿ ನನ್ನ ತಂದೆಯ ಹೆಸರಿನಲ್ಲಿಯೇ ಇತ್ತು. ನಾನು 1965 ನೇ ಸಾಲಿನ ಪಹಣಿಯನ್ನು ನೋಡಿರುವುದಿಲ್ಲ. ಸಾಕ್ಷಿಯು ಸ್ವಲ್ಪ ಹೊತ್ತಿನ ನಂತರ ನೋಡಿದ್ದೇನೆ ಎಂದು ನುಡಿದರು. 1965 ನೇ ಸಾಲಿನ ಪಹಣಿಯನ್ನು ಹಾಜರು ಪಡಿಸಿದೇನೆ. 4 ಸೆಂಟ್ಸ ಪಹಣಿಯನ್ನು ಹಾಜರು ಪಡಿಸಿದ್ದೇನೆ. ಎಷ್ಟನೇ ಇಸವಿಯಿಂದ ಎಷ್ಟನೇ ಇಸವಿಯ ವರೆಗೆ ಪಹಣಿಗಳನ್ನು ಹಾಜರು ಪಡಿಸಿದ್ದೇನೆ ಎಂದು ನನಗೆ ಮಾಹಿತಿ ಇರುವುದಿಲ್ಲ.

2. ಸರ್ವೆ ನಂ 19 ಎ ಅಲ್ಲಿ 48 ಸೆಂಟ್ಸ ಪೈಕಿ 4 ಸೆಂಟ್ಸ ಪಹಣಿ ನಮ್ಮ ಹೆಸರಿನಲ್ಲಿದೆ. ಉಳಿದಂತೆ ಸರ್ವೆ ನಂ 19 ಎ ಅಲ್ಲಿ ಪಾಟೀಲ ಕೊಟ್ರಗೌಡರ ಇವರ ಹೆಸರಿನಲ್ಲಿ 9 ಸೆಂಟ್ಸ ಪಹಣಿ, ಪಾಟೀಲ ಬಸವನಗೌಡ ಇವರ ಹೆಸರಿನಲ್ಲಿ 9 ಸೆಂಟ್ಸ ಪಹಣಿ, ಶಿವಪೂಜಿ ಶಿವಪ್ಪ ಇವರ ಹೆಸರಿನಲ್ಲಿ 4 ಸೆಂಟ್ಸ ಪಹಣಿ, ಶಿವಪೂಜಿ ಕೊಟ್ರಪ್ಪ ಇವರ ಹೆಸರಿನಲ್ಲಿ 2 ಸೆಂಟ್ಸ ಪಹಣಿ ಮಳ್ಳಾಪುರ ನಾಗಮ್ಮ ಇವರ ಹೆಸರಿನಲ್ಲಿ 7 ಸೆಂಟ್ಸ ಪಹಣಿ, ಮಳ್ಳಾಪ್ಪಳ ಕೊಟ್ರಪ್ಪ ಇವರ

ಹೆಸರಿನಲ್ಲಿ 7 ಸೆನ್ಸ ಪಹಣಿ,ಮಳ್ಳಾಪುರ ನಾಗಪ್ಪ ಇವರ ಹೆಸರಿನಲ್ಲಿ 7 ಸೆನ್ಸ ಪಹಣಿ ದಾಖಲು ಇರುತ್ತದೆ.ನಾನು ಮೇಲೆ ಹೇಳಿದ ರೀತಿಯಲ್ಲಿ ಯಾವುದೇ ಪಹಣಿ ದಾಖಲು ಇರುವುದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ನಾನು 9 ನೇ ತರಗತಿ ಫೇಲ್ ಆಗಿದ್ದು ಓದಲು ಬರೆಯಲು ಸ್ವಲ್ಪ ಬರುತ್ತದೆ. ನನಗೆ ನೊಟೀಸು ಮತ್ತು ಉತ್ತರ ನೊಟೀಸುಗಳ ಕುರಿತು ಮಾಹಿತಿ ಇರುವುದಿಲ್ಲ. ಸರ್ವೆ ನಂ 19 ಎ ಅಲ್ಲಿ 4 ಸೆನ್ಸ ನನ್ನ ಹೆಸರಿನಲ್ಲಿ ಪಹಣಿಯಲ್ಲಿ ಇರುವುದಿಲ್ಲ ಮತ್ತು ಯಾವತ್ತೂ ಅದು ನನ್ನ ಸ್ವಾಧೀನ ಅನುಭವದಲ್ಲಿ ಇರಲಿಲ್ಲ ಮತ್ತು ಈಗಲೂ ಇಲ್ಲ ಅಂದರೆ ಸರಿಯಲ್ಲ. ಶಿವಪೂಜಿ ಚೆನ್ನಬಸ್ಸಪ್ಪ ನನಗೆ ದೂಡ್ಡಪ್ಪನಾಗಬೇಕು. ಶಿವಪ್ಪ ನನ್ನ ತಂದೆ. ನಿಡಿ 12 ಪಹಣಿಯಲ್ಲಿ ನನ್ನ ತಂದೆಯ ಹೆಸರಿನಲ್ಲ 2 ಸೆನ್ಸ ಮತ್ತು ನನ್ನ ದೊಡ್ಡಪ್ಪನ ಹೆಸರಿನಲ್ಲಿ 2 ಸೆನ್ಸ ಎಂದು ಉಲ್ಲೇಕ ಇರುವುದು ಅಂದರೆ ಸರಿಯಲ್ಲ.

4. ದಿನಾಂಕ 08.09.1951 ರಲ್ಲಿ ನನ್ನ ದೊಡ್ಡಪ್ಪನಾದ ಚೆನ್ನಬಸ್ಸಪ್ಪನಿಗೆ 4 ಸೆನ್ಸ ಜಮೀನನ್ನು ವಾದಿಯ ಅಜ್ಜನಾದ ಶಿವನಗೌಡ ಇವರು ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಗೆ ಕೊಟ್ಟಿರುವರು ಅಂದರೆ ನನಗೆ ಗೊತ್ತಿಲ್ಲ. 4 ಸೆನ್ಸನ ಹಂಚಿಕೊಂಡು ನನ್ನ ತಂದೆ ಹಾಗೂ ದೊಡ್ಡಪ್ಪ ತಲಾ 2 ಸೆನ್ಸನ್ನು ಪಡೆದುಕೊಂಡಿರುವರು ಅಂದರೆ ಸರಿಯಲ್ಲ. ಆ ಪ್ರಕಾರ ನಿಪಿ 4 ರಂತೆ ಎಂ. ಅರ್ 1324/87-88 ರಂತೆ ಮುಟೇಶನ್ ಕೂಡ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.

5. ನಂತರ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ವಾದಿ ಹಾಗೂ ಸಂಬಂದಪಟ್ಟವರಿಗೆ ಗೊತ್ತಾಗದಂತೆ 4 ಸೆನ್ಸ ಪಹಣಿಯನ್ನು 1994-95 ನೇ ಸಾಲಿನಲ್ಲಿ ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಈಗಲೂ ನನ್ನ ದೊಡ್ಡಪ್ಪನಾದ ಚೆನ್ನಬಸ್ಸಪ್ಪ ಇವರು 2 ಸನ್ಸನ ಸ್ವಾಧೀನ ಅನುಭದಲ್ಲಿ ಇರುವರು. ಸದರಿ 4 ಸೆನ್ಸ ಜಮೀನು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಈಗಲೂ 2 ಸೆನ್ಸನಲ್ಲಿ ಮಾತ್ರ ಸ್ವಾಧೀನದಲ್ಲಿದ್ದೇನೆ ಅಂದರೆ ಸರಿಯಲ್ಲ.

6. ಸರ್ವೆ ನಂ 19 ಎ ರ 48 ಸೆನ್ಸ ಪೈಕಿ 24 ಸೆನ್ಸ ವಾದಿಯ ಅಜ್ಜನಿಗೆ ಸೇರಿದ್ದು ಉಳಿದ 24 ಸೆನ್ಸ 3 ನೇ ವ್ಯಕ್ತಿಗೆ ಸೇರಿದ್ದಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆ 24 ಸೆನ್ಸನ ಪೈಕಿ 4 ಸೆನ್ಸನ್ನು ಮಾತ್ರ ನನ್ನ ದೊಡ್ಡಪ್ಪ ಖರೀದಿಗೆ ತೆಗೆದುಕೊಂಡಿದ್ದರು ಅಂದರೆ ಸರಿಯಲ್ಲ. 4 ಸೆನ್ಸ ಪೈಕಿ ಅರ್ದದಷ್ಟು ಮನೆ ಕಟ್ಟಲು ಬುನಾದಿ ಹಾಕಿದ್ದೇವೆ ಉಳಿದ್ದದನ್ನು ಕೃಷಿ ಸಲಕರಣಿಗಳನ್ನು ಇಡಲು ಉಪಯೋಗಿಸುತ್ತೇವೆ.ಬುನಾದಿ ಹಾಕಿದ 2 ಸೆನ್ಸ ಹೊರತು

ಪಡಿಸಿ ಉಳಿದ ಜಾಗ ನಮ್ಮದಲ್ಲ ಅಂದರೆ ಸರಿಯಲ್ಲ. ಉಳಿದ 20 ಸೆನ್ಸನ ಪೈಕಿ ವಾದಿಗೆ ಸೇರಿದ್ದು ಅಂದರೆ ಸರಿಯಲ್ಲ.

7. ನಿಡಿ 4 ಪರವಾನಿಗೆ ರಲ್ಲಿ ಸರ್ವೆ ನಂಬರು ಕಂಡು ಬರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸದರಿ ಪರವಾನಿಗೆಯನ್ನು ಯಾವಗ ಪಡೆದುಕೊಂಡಿರುವೆನು ಎಂದು ನನಗೆ ನೆನಪಿಲ್ಲ. 1980 ರ ಪೂರ್ವದಲ್ಲಿ ಬುನಾದಿ ಹಾಕಿದ್ದೇನೆ. ಲೈಸೆನ್ಸ ಪಡೆದ ನಂತರ ಬುನಾದಿ ಹಾಕಿದ್ದೇನೆ. ಪರವಾನಿಗೆಯು ಸರ್ವೆ ನಂ 19 ಎ ಗೆ ಸಂಬಂದ ಪಟ್ಟ ದಾಖಲೆ ಎಂದು ತೋರಿಸಲು ಯಾವುದೇ ಬೇರೆ ದಾಖಲೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಕೃಷಿ ಜಮೀನನ್ನು ವ್ಯವಸಾಯೇತಕ್ಕಾಗಿ ಬಳಲು ನಾನು ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲುಃ ವಿನಂತಿ ಮೇರೆಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

22-08-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

ಸಾಕ್ಷಿಯ ಸಹಿ